17.	ದಕ್ಷಿಣ ಕನ್ನಡ	5
18.	ಉಡುಪಿ	3
19.	ಚಾಮರಾಜನಗರ	4
20.	ಬೆಂಗಳೂರು ಗ್ರಾಮಾಂತರ	6
21.	ಬೆಂಗಳೂರು ನಗರ	5
22.	ದಾವಣಗೆರೆ	4
23.	ಶಿವಮೊಗ್ಗ	7
24.	ಚಿತ್ರದುರ್ಗ	6
25.	ಕೋಲಾರ	11
26.	ತುಮಕೂರು	5
27.	ಗದಗ್	3
	ಒಟ್ಟು	134

ಚಿಂತಾಮಣಿ ತಾಲ್ಲೂಕಿನ ಶ್ರೀ ಖಾದ್ರಿ ಲಕ್ಷ್ಮೀ ನರಸಿಂಹಸ್ವಾಮಿ ದೇವಾಲಯ

1760 (1371) ಶ್ರೀ ಚೌಡರೆಡ್ಡಿ (ಚಿಂತಾಮಣಿ) ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಂತಾಮಣಿ ತಾಲ್ಲೂಕು ಅಂಬಜಿದುರ್ಗ ಹೋಬಳಿ ಸಿಂಗ್ರೇಪಲ್ಲಿ ಶ್ರೀ ಖಾದ್ರಿ ಲಕ್ಷ್ಮೀ ನರಸಿಂಹಸ್ವಾಮಿ ದೇವಸ್ಥಾನ ಮುಜರಾಯಿ ಇಲಾಖೆಗೆ ಸೇರಿದ್ದು, ಈ ದೇವಸ್ಥಾನಕ್ಕೆ ಎಷ್ಟು ಎಕರೆ ಸ್ಥಿರಾಸ್ತಿ ಇದೆ ಎಂಬುದನ್ನು ವಿವರವಾಗಿ ತಿಳಿಸುವಿರಾ;

ಆ) ಈ ದೇವಸ್ಥಾನಕ್ಕೆ ಸೇರಿದ ಜಮೀನಿನಲ್ಲಿ ಮಾಲಕಿ ಮತ್ತು ಇತ್ಯಾದಿ ಎಷ್ಟಿದೆ ಹಾಗೂ ಎಷ್ಟು ಹಣ ಬೆಲೆ ಬಾಳುತ್ತದೆ ಎಂಬುದನ್ನು ತಿಳಿಸುವಿರಾ;

ಇ) ಈ ದೇವಸ್ಥಾನಕ್ಕೆ ಸೇರಿದ ಕೆಲವು ಮರಗಳನ್ನು ಖಾಸಗಿಯವರು ಹೊಡೆದು ಮಾಡಿಕೊಂಡು ಹಣ ಮಾಡುತ್ತಿರುವುದು ಮತ್ತು ಕೆಲವು ಹುಣಸೆ ಮರಗಳಲ್ಲಿ ಫಸಲನ್ನು ರೂಡಿಸಿಕೊಂಡು ಹಣ ಗಳಿಸುತ್ತಿರುವುದು, ಈ ಕೃತ್ಯಗಳಿಂದ ದೇವಾಲಯ ಕೈ ಆಗುತ್ತಿರುವ ನಷ್ಟದ ಬಗ್ಗೆ ಸರ್ಕಾರದ ಏನು ಕ್ರಮ ಕೈಗೊಳ್ಳುತ್ತದೆ ತಿಳಿಸುವಿರಾ?

ಶ್ರೀಮತಿ ಸುಮಾ ವಸಂತ್ (ಮುಜರಾಯಿ ರಾಜ್ಯ ಸಚಿವರು)

ಅ) ಚಿಂತಾಮಣಿ ತಾಲ್ಲೂಕು ಅಂಬಜಿದುರ್ಗ ಹೋಬಳಿ ಸಿಂಗ್ರಪಲ್ಲಿ ಶ್ರೀ ಖಾದ್ರಿ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನ ವಿಸ್ತೀರ್ಣದ ವಿವರ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ಗ್ರಾಮ	ಸರ್ವೆ ನಂ.	ವಿಸ್ತೀರ್ಣ ಎ.ಗು.
1.	ಕೆ.ರಾ. ಗುಟ್ಟಹಳ್ಳಿ	3	1.08
2.	"	44	0.15
3.	"	38	0.36
4.	"	43	0.26

1	2	3	4
5.	ತಿಪ್ಪರಹಳ್ಳಿ	44	1.13
6.	ಕೆ.ರಾ. ಗುಟ್ಟಹಳ್ಳಿ	54:ಪಿ2	4.00
		(2 ಎಕರೆ ಕರಾಬು)	
		(2 ಎಕರೆ ಜಮೀನು)	
7.	"	54ಪಿ:ಪಿ1	40.00
8.	"	24	7.05
9.	ವಸಂತಹಳ್ಳಿ	7	0.13

ಆ) ಮೂಲಕ ವಿವರಗಳು ಅನುಬಂಧದಲ್ಲಿ ಲಗತ್ತಿಸಿದೆ. ಈ ದೇವಸ್ಥಾನಕ್ಕೆ ಸೇರಿದ ಜಮೀನಿನಲ್ಲಿ ಒಟ್ಟು 55 ಹುಣಸೆ ಮರಗಳು ಇರುತ್ತವೆ. ವರ್ಷಕ್ಕೊಂದು ಸಲ ಫಸಲು ಹರಾಜು ಮಾಡಿ ದೇವಾಲಯದ ನಿಧಿಗೆ ಮತ್ತು ಸರ್ಕಾರಕ್ಕೆ ಜಮೆ ಮಾಡಲಾಗುತ್ತದೆ.

ಇ) ದೇವಸ್ಥಾನಕ್ಕೆ ಸೇರಿದ ಕೆಲವು ಮರಗಳನ್ನು ಖಾಸಗಿಯವರು ಹೊಡೆದು ಮಾರಿಕೊಂಡಿರುವುದಿಲ್ಲ. ಒಟ್ಟು ಮರಗಳನ್ನು ಕಟಾವು ಮಾಡಿ ಮುಕ್ಕೋಟಿದ್ವಾದಶಿ ಪ್ರಯುಕ್ತ ಒಣ ಸೌದೆಯನ್ನು ದೇವಸ್ಥಾನದ ಪ್ರಸಾದವನ್ನು ತಯಾರು ಮಾಡಲು ಕಡೆದಿರುತ್ತಾರೆಯೇ ಹೊರತು ದೇವಾಲಯಕ್ಕೆ ನಷ್ಟವಾಗುವಂತಹ ಹಸಿ ಮರಗಳನ್ನು ಕಟಾವು ಮಾಡಿರುವ ಬಗ್ಗೆ ಮಾಹಿತಿ ಬಂದಿರುವುದಿಲ್ಲ. ಹರಾಜು ಮೂಲಕ ಫಸಲನ್ನು ವಿಲೇವಾರಿ ಮಾಡಲಾಗುತ್ತದೆ. ಬೇರೆಯವರು ರೂಢಿಸಿಕೊಳ್ಳುವುದಕ್ಕೆ ಅವಕಾಶ ಕೊಟ್ಟಿರುವುದಿಲ್ಲ.

ಅನುಬಂಧ

ಚಿಂತಾಮಣಿ ತಾಲ್ಲೂಕು ಅಂಬಜಿದುರ್ಗ ಹೋಬಳಿ ಸಿಂಗ್ರೇಪಲ್ಲಿ ಶ್ರೀ ಕಾದ್ರಿ ಲಕ್ಷ್ಮೀ ನರಸಿಂಹಸ್ವಾಮಿ ದೇವಸ್ಥಾನದ ಜಮೀನಿನ ಮೂಲಕ ವಿವರಗಳು ಈ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ಗ್ರಾಮ	ಸರ್ವೆ ನಂ.	ವಿಸ್ತೀರ್ಣ ಎ.ಗು.
1.	ಕೆ.ರಾ. ಗುಟ್ಟಹಳ್ಳಿ	3	1.08
2.	"	44	0.15
3.	"	38	0.36
4.	"	43	0.26
5.	ತಿಪ್ಪರಹಳ್ಳಿ	44	1.13
6.	ಕೆ.ರಾ. ಗುಟ್ಟಹಳ್ಳಿ	54:ಪಿ2	4.00
		(2 ಎಕರೆ ಕರಾಬು)	
		(2 ಎಕರೆ ಜಮೀನು)	
7.	"	54ಪಿ:ಪಿ1	40.00
8.	"	24	7.05
9.	ವಸಂತಹಳ್ಳಿ	7	0.13

ಕ್ರಮ ಸಂಖ್ಯೆ (1) ರಿಂದ (5)ರವರೆಗಿನ ಜಮೀನಿನ ವಿವರಗಳು ಪಹಣಿ ಕಲಂ 9ರಲ್ಲಿ ಶ್ರೀ ಲಕ್ಷ್ಮೀ ಎಕರೆ ನರಸಿಂಹಸ್ವಾಮಿ ದೇವರ ಹೆಸರಿನಲ್ಲಿರುತ್ತದೆ.

ಕ್ರಮ ಸಂಖ್ಯೆ (6)ರ ಸರ್ವೆ ನಂ. 54/P1 ರಲ್ಲಿನ 40 ಎಕರೆ ಜಮೀನು ಇದ್ದು, ಪಹಣಿ ಕಲಂ 9ರಲ್ಲಿ 2 ಎಕರೆ ವೆಂಕಟರಾಮಯ್ಯ, ವಗೈರೆ ಮತ್ತು 2 ಎಕರೆ ಸಿಂಗ್ರೇಪಲ್ಲಿ ಶ್ರೀ ಲಕ್ಷ್ಮೀ ನರಸಿಂಹಸ್ವಾಮಿ ಜಾತ್ರೆಯ ಹಕ್ಕು ಅಂತ ನಮೂದಾಗಿರುತ್ತದೆ.

ಕ್ರಮ ಸಂಖ್ಯೆ (7)ರ ಸರ್ವೆ ನಂ. 54/ಪಿ1 ರಲ್ಲಿನ 40 ಎಕರೆ ಜಮೀನು ಪಹಣಿ ಕಲಂ 9ರಲ್ಲಿ ಸಿಂಗ್ರೇಪಲ್ಲಿ ಶ್ರೀ ಲಕ್ಷ್ಮೀ ನರಸಿಂಹಸ್ವಾಮಿ ಹಾಗೂ ಕೊಂಗಿಸುಬ್ಬರಾಯಪ್ಪ ಗುರ್ಲಮುನಿಸ್ವಾಮಿ ನರಸಿಂಹರೆಡ್ಡಿ ಅಂತ ನಮೂದಾಗಿರುತ್ತದೆ. ಪಹಣಿ ಕಲಂ 10ರಲ್ಲಿ ದೇವರ ಸೇವೆಗೂ ಡಿಪ್ಯೂಟಿ ಕಮಿಷನರ್‌ರವರ 15/9 42ನೇ ನಂಬರ್ ಹಕ್ಕು ಅಂತ ನಮೂದಾಗಿರುತ್ತದೆ.

ಪಹಣಿ ಕಲಂ 11ರಲ್ಲಿ ಆರ್‌ಟಿ 10/42-43ನೇ ನಂಬರ್ ಆರ್ಡರ್ ರೀತಿ 3ನೇ ಇಸ್ಸೆ ಫಸಲು ಅರಣ್ಯ ಪಡಿಸಿದವರಿಗೆ ಸಲ್ಲುವಂತೆ ನಮೂದಾಗಿರುತ್ತದೆ.

ಕ್ರಮ ಸಂಖ್ಯೆ (8)ರ ಸರ್ವೆ ನಂ. 24ರಲ್ಲಿನ 7.05 ಎಕರೆ ಜಮೀನು ಪಹಣಿ ಕಲಂ 9ರಲ್ಲಿ ದೇವರಕೆರೆ ಲಕ್ಷ್ಮಣಸಿಂಗ್ ಮರಗಳ ಹಕ್ಕು ಮಂಜೂರಾತಿ ಅಂತ ನಮೂದಾಗಿರುತ್ತದೆ. ಕಲಂ 11ರಲ್ಲಿ ಮಾಡಿ ವೆಂಕಟರಾಯನಿಗೆ ಸರ್ಕಾರಿ 60 ಹೊಂಗೆ ಮರಗಳ ಹಕ್ಕು ಎಂಎಸ್‌ಜಿ/ 103-79-80, 273/1-85-86.

ಕ್ರಮ ಸಂಖ್ಯೆ (9)ರ ಸರ್ವೆ ನಂ. 7ರಲ್ಲಿನ 0.13 ಎಕರೆ ಜಮೀನು ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವರ ಹೆಸರಿನಲ್ಲಿರುತ್ತದೆ.

ಚಿಂತಾಮಣಿ ಕ್ಷೇತ್ರದ ರಸ್ತೆಗಳ ಅಭಿವೃದ್ಧಿ

1761 (1372) ಶ್ರೀ ಚೌಡರೆಡ್ಡಿ (ಚಿಂತಾಮಣಿ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು-ಚಿಂತಾಮಣಿ ರಸ್ತೆಯಿಂದ ಚಿಂತಾಮಣಿ ಚನ್ನಸಂದ್ರ ರಸ್ತೆಗೆ ಕೈವಾರ, ತಪೋವನ ನಾರಾಯಣಹಳ್ಳಿಯ ಸುಮಾರು 10.30 ಕಿ.ಮೀ ರಸ್ತೆ ಅಭಿವೃದ್ಧಿಗೋಸ್ಕರ ಸುಮಾರು 40 ಲಕ್ಷ ರೂಪಾಯಿ ಸಿ.ಆರ್.ಎಫ್. ನಿಧಿಯಿಂದ ಹಣ ಮಂಜೂರು ಮಾಡಲು ಕೇಂದ್ರ ಸರ್ಕಾರಕ್ಕೆ ಯಾವಾಗ ಶಿಫಾರಸ್ಸು ಮಾಡಲಾಯಿತು;

ಆ) ಈ ರಸ್ತೆಯು ಬಹಳ ಅವ್ಯವಸ್ಥೆಯಾಗಿರುವುದು ಪ್ರಯಾಣಿಕರಿಗೆ ವಾಹನ ಚಾಲಕರಿಗೆ ಇದರಿಂದ ತುಂಬಾ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಈ ರಸ್ತೆಯನ್ನು ಅಭಿವೃದ್ಧಿಪಡಿಸಲು ಸರ್ಕಾರ ಬೇಗನೆ ಕ್ರಮ ತೆಗೆದುಕೊಳ್ಳುತ್ತದೆಯೇ ಇಲ್ಲವೆ ಎಂಬುದನ್ನು ತಿಳಿಸುವಿರಾ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು)

ಅ) ಕೇಂದ್ರ ರಸ್ತೆ ನಿಧಿ ಅಡಿಯಲ್ಲಿನ ಅನುದಾನದ ಲಭ್ಯತೆ ಅನುಸರಿಸಿ ಮುಂದಿನ ವರ್ಷದಲ್ಲಿ ತೆಗೆದುಕೊಳ್ಳಲು ಪರಿಶೀಲಿಸಲಾಗುವುದು.

ಆ) ವಾರ್ಷಿಕ ನಿರ್ವಹಣಾ ಯೋಜನೆಯಡಿಯಲ್ಲಿ ಗುಂಡಿಗಳನ್ನು ಮುಚ್ಚಿ ರಸ್ತೆಯನ್ನು ವಾಹನ ಸಂಚಾರಕ್ಕೆ ಯೋಗ್ಯವಾಗಿಡಲು ಕ್ರಮ ಕೈಗೊಳ್ಳಲಾಗಿರುತ್ತದೆ.

ಇ) ಅನುದಾನ ಲಭ್ಯತೆ ಮೇರೆಗೆ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಪರಿಶೀಲಿಸಲಾಗುವುದು.